# ಅಂಬಪಾಲಿ

ಎಲ್ಲಾ ಅರಸರು ನಿನ್ನೆದುರು ತಿರುಕರು
ಎಲ್ಲಾ ಶೂರರು ನಿನ್ನೊಳಗೆ ಸೆರೆಯಾಳುಗಳು
ಎಲ್ಲ ಸಂಪತ್ತೂ ಈಗಿಲ್ಲಿ ಕಿಂಚಿತ್ತು

ಇದು ಎಚ್.ಎಸ್. ಶಿವಪ್ರಕಾಶ್ ಅವರ 'ಅಂಬಪಾಲಿ' ಕವಿತೆಯ ಸಾಲುಗಳು. ಅಂಬಪಾಲಿ ವೈಶಾಲಿಯ ಅಪ್ರತಿಮ ಸುಂದರಿ; ನಗರವಧು ಎಂದು ಕರೆಸಿಕೊಂಡ ಪ್ರಮುಖ ಗಣಿಕೆಯರಲ್ಲಿ ಒಬ್ಬಳು. ಬುದ್ಧನ ಚರಿತ್ರೆಯಲ್ಲಿ ಬರುವ ಅಂಬಪಾಲಿ, 'ಮೃಚ್ಛಕಟಿಕ'ದಲ್ಲಿನ ವಸಂತಸೇನೆ ಹಾಗೂ 'ಶಿಲಪ್ಪದಿಗಾರಂ'ನಲ್ಲಿನ ಮಾಧವಿ ಮುಖ್ಯರಾದವರು. ಅಂಬಪಾಲಿ ಕಾಲಾನುಕಾಲಕ್ಕೆ ಲೌಕಿಕದ ಭೋಗಭಾಗ್ಯಗಳಿಗೆ ವಿಮುಖಳಾಗಿ ಬುದ್ಧನ ಶಿಷ್ಯಳಾಗುತ್ತಾಳೆ. ಸೌಂದರ್ಯ, ಆಕರ್ಷಣೆ, ಶ್ರೀಮಂತಿಕೆ, ವೈರಾಗ್ಯ ಎಲ್ಲವೂ ಒಂದೇ ಜೀವನದಲ್ಲಿ ಸಾಧ್ಯ ಎನ್ನುವಂತೆ ಬದುಕಿ ದಂತಕಥೆಯಾದವಳು ಅವಳು.

ಅಮ್ರಪಾಲಿ, ಅಂಬಪಾಲಿ, ಅಂಬಪಾಲಿಕಾ ಹೀಗೆ ಹಲವು ಹೆಸರುಗಳಿಂದ ಅವಳು ಕರೆಸಿಕೊಂಡಿದ್ದಾಳೆ. ವೈಶಾಲಿಯ ಮಾವಿನ ಮರವೊಂದರ ಬುಡದಲ್ಲಿ ದೊರೆತವಳು ಎಂಬ ಕತೆ ಅವಳ ಬಗ್ಗೆ ಲಭ್ಯವಾಗುತ್ತದೆ. ಆಮ್ರ (ಮಾವು) ಮತ್ತು ಪಲ್ಲವ (ಚಿಗುರು) ಈ ಎರಡೂ ಪದಗಳಿಂದ ಹುಟ್ಟಿದ ಪದ ಆಮ್ರಪಾಲಿ. ಅದು ನಂತರ ಅಂಬಪಾಲಿಯಾಗಿರಬಹುದು.

ಅಂಬಪಾಲಿ ವೈಶಾಲಿಯ ರಾಜನರ್ತಕಿಯಾಗಿ ನೇಮಕಗೊಳ್ಳುವುದಕ್ಕೆ ಮುಂಚೆ ಮಾವಿನ ಮರದ ಬಳಿ ದೊರೆತ ಶಿಶುರೂಪದ ಅವಳನ್ನು ಮಾಹಾನಾಮ ಎಂಬ ವ್ಯಕ್ತಿ ಪೋಷಿಸಿ ಬೆಳೆಸುತ್ತಾನೆ. ಅಪ್ರತಿಮ ಸುಂದರಿಯಾಗಿದ್ದ ಅವಳನ್ನು ವಿವಾಹವಾಗಲು ಯುವಕರಲ್ಲಿ ಸ್ಪರ್ಧೆ ಆರಂಭವಾಗುತ್ತದೆ. ಅವಳು ತನ್ನ ಬಾಲ್ಯದ ಗೆಳೆಯ, ಪ್ರೇಮಿ ಪುಷ್ಪಕುಮಾರನನ್ನು ಮದುವೆಯಾಗುವ ಹಂಬಲವಿಟ್ಟುಕೊಂಡಿರುತ್ತಾಳೆ. ಅವಳ ಸೌಂದರ್ಯದ ಪ್ರಸಿದ್ಧಿ ಹಾಗೂ ಅವಳ ಬಗೆಗಿನ ಆಕರ್ಷಣೆಯಿಂದಾಗಿ ವೈಶಾಲಿಯ ಅರಸ ಮನುದೇವ ಪುಷ್ಪಕುಮಾರನನ್ನು ಕೊಲ್ಲಿಸಿ ಅವಳನ್ನು ನಗರವಧುವನ್ನಾಗಿಸುತ್ತಾನೆ. ಈ ವಧುವಿಗೆ ವಿವಾಹ ಬಿಟ್ಟು ಇನ್ನೆಲ್ಲ ಆಯ್ಕೆಗಳನ್ನು ಕೊಡಲಾಗುತ್ತದೆ. ಎಳೆಯ ವಯಸ್ಸಿನಲ್ಲೇ ತನ್ನ ಪ್ರೇಮ ಕಳಕೊಂಡ ಆಕೆ ಅನಿವಾರ್ಯವಾಗಿ ರಾಜನರ್ತಕಿಯಾಗುತ್ತಾಳೆ. ಅವಳ ಒಂದು ನರ್ತನಕ್ಕೆ ಸಹಸ್ರಾರು ಹೊನ್ನನ್ನು ಶ್ರೀಮಂತ ರಸಿಕರು ಸುರಿಯಲಾರಂಭಿಸುತ್ತಾರೆ. ವೈಶಾಲಿಯ ಅರಸನಿಗಿಂತ ಅವಳು ಒಂದು ಪಟ್ಟು ಹೆಚ್ಚು ಶ್ರೀಮಂತಳಾಗಿದ್ದಳು ಎನ್ನಲಾಗಿದೆ.

ಅವಳ ಸೌಂದರ್ಯ ಮಗಧದ ದೊರೆ ಬಿಂಬಸಾರನನ್ನು ತಲುಪಿ ಅವನು ವೈಶಾಲಿಯ ಮೇಲೆ ಯುದ್ಧ ಸಾರುತ್ತಾನೆ. ಯುದ್ಧದಲ್ಲಿ ಗಾಯಗೊಂಡ ಬಿಂಬಸಾರ ಮಾರುವೇಷದಲ್ಲಿ ಅಂಬಪಾಲಿಯ ಅರಮನೆ ಸೇರಿ ಅವಳಿಂದ ಚಿಕಿತ್ಸೆ ಪಡೆಯುತ್ತಾನೆ. ಕ್ರಮೇಣ ಇಬ್ಬರೂ ಪರಸ್ಪರ ಪ್ರೇಮಿಸಲಾರಂಭಿಸುತ್ತಾರೆ. ಮುಂದೆ ಅವನು ಬಿಂಬಸಾರನೆಂದು ತಿಳಿದಾಗ ತನ್ನನ್ನು ತೊರೆಯುವಂತೆ ಹಾಗೂ ಯುದ್ಧವನ್ನು ಹಿಂತೆಗೆದುಕೊಳ್ಳುವಂತೆ ಕೇಳಿಕೊಳ್ಳುತ್ತಾಳೆ. ಅವಳಿಗಾಗಿ ಯುದ್ಧದಿಂದ ಹಿಂದೆ ಸರಿದ ಬಿಂಬಸಾರ ತನ್ನ ಪ್ರಜೆಗಳಿಂದ ಹೇಡಿ ಎಂದು ಕರೆಸಿಕೊಳ್ಳಬೇಕಾಗುತ್ತದೆ. ಈ ಸಂಬಂಧದಿಂದಾಗಿ ವಿಮಲ ಕೊಂಡಣ್ಣ ಎಂಬ ಮಗನೂ ಜನಿಸುತ್ತಾನೆ. ಇವನೂ ಸಹ ತಾಯಿಯ ಹಾಗೆ ಮುಂದೆ ಬುದ್ಧನ ಶಿಷ್ಯನಾದ ಕತೆಗಳು ಲಭ್ಯವಿವೆ.

ಬಿಂಬಸಾರನ ಮಗ ಅಜಾತಶತ್ರು ಅಧಿಕಾರವನ್ನು ತನ್ನ ಕೈಗೆ ತೆಗೆದುಕೊಂಡು ತಂದೆಯನ್ನು ಸೆರೆಯಲ್ಲಿಡುತ್ತಾನೆ. ಸಾಮ್ರಾಜ್ಯವನ್ನು ವಿಸ್ತರಿಸುವ ಬಯಕೆಯಿಂದ ಅಕ್ಕಪಕ್ಕದ ರಾಜ್ಯಗಳಾದ ಕೋಸಲ, ಕಾಶಿ, ವೈಶಾಲಿಯ ಮೇಲೆ ಯುದ್ಧ ಸಾರಿ ವಶಪಡಿಸಿಕೊಳ್ಳುತ್ತಾನೆ. ವೈಶಾಲಿಯ ಬೀದಿಯಲ್ಲಿ ಸೈನಿಕರೊಂದಿಗೆ ನಡೆದಾಡುವಾಗ ಅಂಬಪಾಲಿಯ ಸೌಂದರ್ಯದ ಬಗ್ಗೆ ಕೇಳಿ ಅವಳೆಡೆಗೆ ಆಕರ್ಷಿತನಾಗುತ್ತಾನೆ. ಅವಳು ಅವನ ಪ್ರೇಮವನ್ನು ತಿರಸ್ಕರಿಸಿದಳು ಮತ್ತು ಒಪ್ಪಿಕೊಂಡಳು ಎಂಬ ಎರಡೂ ಮಾತುಗಳಿವೆ. ತಂದೆ–ಮಗ ಇಬ್ಬರಲ್ಲೂ ಮೋಹವುಕ್ಕಿಸಿದಳು ಎಂದು ರೊಚ್ಚಿಗೆದ್ದ ಪ್ರಜೆಗಳು ಅವಳಿಗೆ ಸೆರೆವಾಸ ವಿಧಿಸಬೇಕೆಂದು ಗದ್ದಲ ಮಾಡುತ್ತಾರೆ. ಸಿಟ್ಟಿಗೆದ್ದ ಅಜಾತಶತ್ರು ವೈಶಾಲಿಯನ್ನು ಸುಡುತ್ತಾನೆ. ಅಂಬಪಾಲಿ ಮಾತ್ರ ಈ ದಾಳಿಗೆ ಒಳಗಾಗದೆ ಸುರಕ್ಷಿತಳಾಗಿರುತ್ತಾಳೆ. ತನ್ನ ನಗರಕ್ಕೆ ತನ್ನಿಂದಾದ ಕೇಡನ್ನು ಕಂಡು ಅವಳು ಅಜಾತಶತ್ರುವಿನಿಂದ ದೂರಾದಳು ಎನ್ನಲಾಗಿದೆ.

ತನ್ನ ಸೌಂದಯವೇ ಶಾಪವಾಗಿ ಅವಳು ತೊಳಲಾಡುವ ಸಂದರ್ಭದಲ್ಲಿ ಬುದ್ಧ ತನ್ನ ಶಿಷ್ಯರೊಡನೆ ವೈಶಾಲಿಗೆ ಬಂದು ಅವಳಿಗೆ ಸೇರಿದ ಆಮ್ರವನದಲ್ಲಿ ತಂಗುತ್ತಾನೆ. ಅಲ್ಲಿಗೆ ಹೋಗಿ ಬುದ್ಧನನ್ನು ಕಂಡು ಅವನ ಅಡಿದಾವರೆಗೆ ವಂದಿಸುತ್ತಾಳೆ. ಬುದ್ಧ ಮತ್ತು ಅವನ ಶಿಷ್ಯರನ್ನು ಮರುದಿನ ಭೋಜನಕ್ಕೆ ಆಹ್ವಾನಿಸುತ್ತಾಳೆ. ಬುದ್ಧ ನಸುನಗುತ್ತಾ ಒಪ್ಪಿಕೊಳ್ಳುತ್ತಾನೆ. ಅವಳ ಸೆಳೆಯುವ ಸೌಂದರ್ಯ ಹಾಗೂ ಪ್ರತೀತಿಗಳ ಬಗ್ಗೆ ಕೇಳಿದ್ದ ಶಿಷ್ಯರಿಗೆ ಬುದ್ಧ ಆಮಂತ್ರಣಕ್ಕೆ ಒಪ್ಪಿಕೊಂಡಿದ್ದು ಇಷ್ಟವಾಗುವುದಿಲ್ಲ.

ಆಮ್ರವನದಿಂದ ಹಿಂತಿರುಗುವಾಗ ವೈಶಾಲಿಯ ಲಿಚ್ಛವಿ ಕುಲದ ಕುಮಾರರ ರಥಕ್ಕೆ ಅಂಬಪಾಲಿಯ ರಥ ತಗಲಿ ವಾಗ್ವಾದಗಳಾಗುತ್ತವೆ. ಆಗ ಆ ಕುಮಾರರಿಗೆ ತನ್ನ ಮನೆಗೆ ಬುದ್ಧ ಭೋಜನಕ್ಕೆ ಬರುವ ಸುದ್ದಿ ತಿಳಿಸುತ್ತಾಳೆ. ಅವರು ತಾವು ಅಪಾರವಾದ ಹೊನ್ನು ಕೊಡುತ್ತೇವೆ. ಆಮಂತ್ರಣವನ್ನು ರದ್ದು ಮಾಡು, ತಮ್ಮ ಮನೆಗೆ ಬುದ್ಧನನ್ನು ಆಹ್ವಾನಿಸುತ್ತೇವೆ ಎನ್ನುತ್ತಾರೆ. ಅವಳು ಅದನ್ನು ತಿರಸ್ಕರಿಸಿ ಮುನ್ನಡೆಯುತ್ತಾಳೆ. ಗಣಿಕೆಯ ಮನೆಗೆ ಬುದ್ಧ ಹೋಗಲಾರ ಎಂದು ಆಲೋಚಿಸಿದ ಅವರು ಬುದ್ಧನನ್ನು ಆಮಂತ್ರಿಸಲು ಆಮ್ರವನಕ್ಕೆ ಹೋಗುತ್ತಾರೆ. ಅವರ ಆಮಂತ್ರಣವನ್ನು ತಿರಸ್ಕರಿಸಿದ ಬುದ್ಧ, ಅಂಬಪಾಲಿಯ ಮನೆಗೆ ಹೋಗಲಿರುವ ಸುದ್ದಿ ತಿಳಿಸುತ್ತಾನೆ. ಅವರು ನಿರಾಶರಾಗಿ ಹಿಂದಿರುಗುತ್ತಾರೆ.

ಮರುದಿನ ಮುಂಜಾನೆ ಬುದ್ಧ ಭಿಕ್ಷಾಪಾತ್ರೆ ಹಿಡಿದು ಶಿಷ್ಯರೊಂದಿಗೆ ಆಮ್ರಪಾಲಿಯ ಅರಮನೆಗೆ ಬರುತ್ತಾನೆ. ಆಕೆ ಭೋಜನ ಬಡಿಸುತ್ತಾಳೆ. ಬುದ್ಧನ ಸಮೀಪ ಕುಳಿತ ಆಕೆ ತನ್ನ ಅರಮನೆ, ಸಮಸ್ತ ಸಂಪತ್ತು, ಆಮ್ರವನವನ್ನು ಅವನಿಗೆ ಸಮರ್ಪಿಸುತ್ತಾಳೆ. ಬುದ್ಧ ಅವಳಿಗೆ ಬೌದ್ಧಧರ್ಮವನ್ನು ಬೋಧಿಸಿ ತನ್ನ ಸಂಘಕ್ಕೆ ಬರಮಾಡಿಕೊಳ್ಳುತ್ತಾನೆ. ಬುದ್ಧನ ಎದುರು ವಿನೀತರಾಗಿ ನಿಂತವರೆಲ್ಲರಿಗೂ ಲೌಕಿಕ ಬಂಧನಗಳಿಂದ ಬಿಡುಗಡೆ ಸಾಧ್ಯವಿತ್ತು ಎಂಬುದಕ್ಕೆ ಇದೊಂದು ಪ್ರತ್ಯಕ್ಷ ಉದಾಹರಣೆ.

ಭೋಗಗಳು ಸದಾ ಕಾಲ ಮಾನವರಿಗೆ ಶಾಂತಿಯನ್ನು ಕೊಡಲಾರವು ಎಂಬುದನ್ನು ಬುದ್ಧನ ಸಂಘದಲ್ಲಿ ಅಂಬಪಾಲಿ ಅರಿತು, ಅವನ ಬೆಳಕಿನಲ್ಲಿ ನಡೆಯಲು ತೀರ್ಮಾನಿಸುತ್ತಾಳೆ. ಇಂತಹುದೇ ಘಟನೆ ಕ್ರಿಸ್ತನ ಕತೆಯಲ್ಲಿದೆ. ತನ್ನ ಹನ್ನೆರಡು ಶಿಷ್ಯರ ಜೊತೆ ನೊಂದವರ ಯಾತನೆಗಳನ್ನು ಹೋಗಲಾಡಿಸಲು ಜನರ ಬಳಿಗೆ ಹೊರಟ ಕ್ರಿಸ್ತ, ಪತಿತೆಯಾದ ಮ್ಯಾಗ್ದಲಿನ್‌ನ ಮೇರಿಯನ್ನು ಕಾಣುತ್ತಾನೆ. ಕಲ್ಲೆಸೆಯುತ್ತಿದ್ದ ಜನರ ವಿರೋಧದನ್ನು ಲೆಕ್ಕಿಸದೆ ಅವಳಿಗೆ ಆಶ್ರಯ ನೀಡುತ್ತಾನೆ. ಮುಂದೆ ಅವನನ್ನು ಶಿಲುಬೆಗೇರಿಸುವವರೆಗೂ ಅವಳು ಕ್ರಿಸ್ತನ ನೆರಳಾಗಿಯೇ ಇದ್ದಳು.

ಅಂಬಪಾಲಿಯಾಗಲೀ, ಮ್ಯಾಗ್ದಲಿನ್ ಮೇರಿಯಾಗಲೀ ಸಂತರಿಂದ ಪ್ರಭಾವಿತರಾಗಿ ಹೊಸ ಬದುಕನ್ನು ಪಡೆದವರು. ಹೆಣ್ಣಿಗೆ ಮುಕ್ತಿ ಸಾಧ್ಯವಿಲ್ಲ ಎನ್ನುವ ನಂಬಿಕೆಗಳಿದ್ದ ಕಾಲದಲ್ಲೇ ಶಿಷ್ಯರಾಗುವ ಅವಕಾಶ ಪಡೆದ ಕತೆಗಳು ಮೆಚ್ಚುಗೆ ಮೂಡಿಸುತ್ತವೆ. ಪತಿತೆಯರೆಂದು ಅಮಾನವೀಯವಾಗಿ ಕಲ್ಲುಹೊಡೆದು ಕೊಲ್ಲುವ, ಸುಡುವ ಕಾಲಮಾನದಲ್ಲಿ ಸಂತರ ಜೊತೆ ಸದಾ ಇರುವ ಅವಕಾಶ ಪಡೆಯುವುದೆಂದರೆ ಸಾಮಾನ್ಯ ಸಂಗತಿಯೇನಲ್ಲ.

■ **ಅಮೃತಮತಿ**

## ಮಾತೇ ಮುತ್ತು

- ತಿಳಿದು ಬದುಕುವುದು ಮನುಷ್ಯ ಧರ್ಮ; ತಿಂದು ಬದುಕುವುದು ಪ್ರಾಣಿ ಧರ್ಮ.
  —ದ.ರಾ. ಬೇಂದ್ರೆ
- ಆತ್ಮವಿಶ್ವಾಸ, ಜಯದ ಮೊದಲ ಗುಟ್ಟು.
  —ಎಮರ್ಸನ್
- ಸ್ವರ್ಗವೆನ್ನುವುದು ಇನ್ನೆಲ್ಲಿಯೂ ಇಲ್ಲ. ಅದು ಸುಖೀ ಸಂಸಾರದಲ್ಲಿಯೇ ಇದೆ.
  —ಪಾಟೀಲ ಪುಟ್ಟಪ್ಪ
- ಜಗತ್ತಿನಲ್ಲಿ ಅತ್ಯಂತ ಬಲಯುತ ಶಕ್ತಿ ಎಂದರೆ ಪ್ರೀತಿ. ಪ್ರೀತಿ ಇಲ್ಲದ ಜೀವನ ಸಾವಿಗೆ ಸಮ.
  —ಮಹಾತ್ಮ ಗಾಂಧಿ
- ಜ್ಞಾನಕ್ಕೆ ಸಮನಾದ ವಸ್ತು ಬೇರೊಂದಿಲ್ಲ.
  —ಭಗವದ್ಗೀತೆ